# ನಕ್ಕುಬಿಡಿ



ಟೀಚರ್: ಮಕ್ಕಳೇ ನೀವೆಲ್ಲಾ ಯುದ್ಧದಲ್ಲಿ ಇದ್ದೀರಿ ಎಂದು ಊಹಿಸಿಕೊಂಡು ಒಂದು ಪ್ರಬಂಧ ಬರೆಯಿರಿ.
ಮಕ್ಕಳು: ಓಕೆ ಟೀಚರ್.
ಟೀಚರ್: (ಅರ್ಧ ಗಂಟೆಯ ನಂತರ) ಗುಂಡ ನೀನ್ಯಾಕೆ ಬರೆಯುತ್ತಿಲ್ಲ?
ಗುಂಡ: ಯುದ್ಧ ಆರಂಭವಾಗುತ್ತಲೇ ಶತ್ರುಗಳು ನನ್ನನ್ನು ಕೊಂದು ಬಿಟ್ಟರು ಮಿಸ್.

★★★

ಪದ್ದಿ: ರೀ ಎಲ್ಲಿದ್ದೀರಿ?
ಗುಂಡ: ನಾನು ಹಾಲ್ ಮತ್ತು ಅಡುಗೆ ಮನೆ ಮಧ್ಯದಲ್ಲಿರೋ ಬಾಗಿಲಿನ ಬಳಿ ಇದ್ದೇನೆ.
ಪದ್ದಿ: ಮನೆಯಲ್ಲಿದ್ದೀನಿ ಅನ್ನೋಕಾಗಲ್ಲವಾ?
ಗುಂಡ: ಮತ್ತೆ ನೀನು ಲ್ಯಾಂಡ್‌ಲೈನ್‌ಗೆ ಫೋನ್ ಮಾಡಿ ಎಲ್ಲಿದ್ದೀಯಾ ಅಂತ ಕೇಳಬಹುದಾ?

★★★

ಟೀಚರ್: ಮೊಟ್ಟ ಮೊದಲ ಸಲ ವಿಮಾನವು ಎಲ್ಲಿಂದ ಎಲ್ಲಿಗೆ ಹಾರಿತು?
ಗುಂಡ: ವಿಮಾನವು ಮೊಟ್ಟ ಮೊದಲ ಬಾರಿಗೆ ಭೂಮಿಯಿಂದ ಆಕಾಶಕ್ಕೆ ಹಾರಿತು ಮಿಸ್.

★★★

ಪದ್ದಿ: ಮಕ್ಕಳೇ ಇವತ್ತಿನ ಪಾಠ ರಾಕೆಟ್.
ಗುಂಡ: ಹಾಂ! ಮೇಡಮ್.
ಪದ್ದಿ: ರಾಕೆಟ್ ಅಂದರೆ ಎನು?
ಗುಂಡ: ಇವತ್ತಿನ ಪಾಠ ಮೇಡಮ್.

★★★

ಪಮ್ಮಿ: ನನ್ನ ಜೀವನ ದುರದೃಷ್ಟಕರ ಕಣೇ.
ತಿಮ್ಮಿ: ಯಾಕೆ ಹಾಗಂತೀಯಾ?
ಪದ್ದಿ: ನಾನು ಸೊಸೆಯಾಗಿದ್ದಾಗ ಒಳ್ಳೆಯ ಅತ್ತೆ ಸಿಗಲಿಲ್ಲ. ಈಗ ಅತ್ತೆಯಾದೆ. ಒಳ್ಳೆಯ ಸೊಸೆಯೂ ಸಿಕ್ಕಿಲ್ಲ.
ಪದ್ದಿ: **Urad dal** ಅಂದ್ರೆ ಹೆಸರು ಬೇಳೆನಾ?
ತಿಮ್ಮಿ: ಅಲ್ಲ ಉದ್ದಿನ ಬೇಳೆ.
ಪದ್ದಿ: ಯಾವುದಿದು ಅಲ್ಲಾವುದ್ದೀನ್ ಬೇಳೆ?
ತಿಮ್ಮಿ: ಅಲ್ಲ, ಉದ್ದಿನ ಬೇಳೆ ಅಂತ ಹೇಳಿದೆ. ಅಲ್ಲಾವುದ್ದೀನ್ ಅಲ್ಲ.

★★★

ತಿಮ್ಮಿ: ಕಾಣೆಯಾಗಿದ್ದ ನಿನ್ನ ಗಂಡ ದೊಡ್ಡ ಹೊಟ್ಟೆಯ ಕುಬ್ಜ ಆಕಾರದ ಬೋಳು ತಲೆಯವರಲ್ವಾ. ಪೊಲೀಸ್ ಸ್ಟೇಷನ್ನಿನಲ್ಲಿ ಯಾಕೆ ನನ್ನ ಗಂಡ ಬಿಳಿ ಬಣ್ಣದ, ಸ್ಲಿಮ್ ಆಗಿರುವ, ಎತ್ತರದ ವ್ಯಕ್ತಿ, ತಲೆ ತುಂಬಾ ಕೂದಲು ಇದೆ ಅಂತ ಹೇಳಿದೆ?
ಪದ್ದಿ: ಹೋದದ್ದು ಹೋಯಿತು. ಚಿಂತಿಸಬೇಕಿಲ್ಲ. ಸಿಗುವುದಾದರೂ ಚಂದದ್ದು ಸಿಗಲಿ ಅಂತ.

(ಸಂಗ್ರಹ) ಭೋಜರಾಜ ಸೊಪ್ಪಿಮಠ, ಕೊಪ್ಪಳ


